ಅಸಲು ದಾವಾ ಸಂಖ್ಯೆ - 288/2013

ಪಿಡಬ್ಲ್ಯೂ - 01

ದಿನಾಂಕಃ 24.02.2021

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ.

ದಾವೆಯನ್ನು ದಾಖಲಿಸಲು ಮೂಲ ವಾದಿಗೆ ನಾನೇ ಹೇಳಿದ್ದೆ ಎಂದರೆ ಸರಿ. ದಾವೆಯಲ್ಲಿ ಏನು ಪರಿಹಾರ ಕೋರಿ ಮೂಲ ವಾದಿ ದಾಖಲಿಸಿದ್ದರು ಎಂದರೆ ನನಗೆ ಗೊತ್ತು. ಈ ದಾವೆಯಲ್ಲಿ ಒಬ್ಬರೇ ದುಖಾನದಾರ ಎನ್ನುವ ಪ್ರತಿವಾದಿ ಇದ್ದಾರೆ. ಪ್ರತಿವಾದಿಯ ಹೆಸರು ಅಲ್ಲಾವುದ್ದೀನ್ ಗೌಸಮೋದಿನ ದುಖಾನದಾರ ಇರುತ್ತದೆ. ಅಲ್ಲಾವುದ್ದೀನ್ ಗೌಸಮೋದಿನ ದುಖಾನದಾರ 2013 ರಲ್ಲಿ ತಂಟೆ ಮಾಡಿದ್ದರು. ಅವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ಪಿರ್ಯಾದಿಯನ್ನು ದಾಖಲಿಸಿಲ್ಲ. ಪ್ರತಿವಾದಿಯ ಆಸ್ತಿ ನಂ.19/2 ಇರುತ್ತದೆ. ತಹಶೀಲ್ದಾರ ಕಚೇರಿಯಿಂದ ದಿನಾಂಕಃ 20.05.2000 ರಂದು ಪಾರ್ಮ ನಂ.ಯು ನನ್ನ ತಂದೆಗೆ ಬಂದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಒಪ್ಪಿಗೆ ನೀಡಿದ್ದರ ಮೇರೆಗೆ ದಾವಾ ಆಸ್ತಿ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ. ದಿನಾಂಕಃ 22.02.2000 ರಂದು ನನ್ನ ತಂದೆ ಹಿಬಾ ಭಕ್ಷೀಸ ಮಾಡಿಕೊಟ್ಟ ನಂತರ ಮತ್ತೆ ಅದನ್ನು ಮರಳಿ ಪಡೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 2000 ನೇ ಇಸ್ವಿಯಲ್ಲಿ ಪ್ರತಿವಾದಿಯರ ಹೆಸರು ದಾವಾ ಆಸ್ತಿಗೆ ದಾಖಲಾದ ನಂತರ ನಾನು ಕಂದಾಯ ಅಧಿಕಾರಿಗಳಿಗಾಗಲೀ ಅಥವಾ ಪುರಸಭೆ ಅಧಿಕಾರಿಗಳಿಗಾಗಲೀ ಯಾವುದೇ ತಕರಾರು ಕೊಟ್ಟಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ತೆರಿಗೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಆಸ್ತಿಗೆ ಕಂದಾಯ ಪಾವತಿಸುತ್ತಿದ್ದರೂ ನಾನು ಪಾವತಿಸುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿ ಮೇಲೆ ಎಷ್ಟು ಸಾಲ ಪಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಋಣ ಭಾರ ಪ್ರಮಾಣಪತ್ರವನ್ನು ಪಡೆದುಕೊಂಡಿಲ್ಲ ಎಂದರೆ ಸರಿ . ನನ್ನ ತಂದೆಗೆ ಈ ದಾವೆ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲ

ಎಂದರೆ ಸರಿಯಲ್ಲ. ದಾವಾ ಆಸ್ತಿಗೆ 2 ನೇ ಪ್ರತಿವಾದಿ ಸಂಪೂರ್ಣ ಮಾಲೀಕರು ಇರುವ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.